### ಹೊಸ ನೀತಿಯ ಅಗತ್ಯದ ಹಿಂದಿನ ಪ್ರಶ್ನೆ

ಇದುವರೆಗಿನ ಶಿಕ್ಷಣ ನೀತಿಗಳೆಲ್ಲ ಶೈಕ್ಷಣಿಕ ವ್ಯವಸ್ಥೆಯ ಅಭಿವೃದ್ಧಿಗೆ ನಿರೀಕ್ಷಿತ ಮಟ್ಟದಲ್ಲಿ ಕೆಲಸಮಾಡಿಲ್ಲ ಮತ್ತು ಹೊಸ ಶತಮಾನದ ವೇಗದ ಬೆಳವಣಿಗೆಗೆ ಪೂರಕವಾಗಿ ಕೆಲಸಮಾಡುವ ಶೈಕ್ಷಣಿಕ ವ್ಯವಸ್ಥೆಯ ಅಗತ್ಯವಿತ್ತು ಎಂಬ ಕಾರಣಕ್ಕೆ ಈ 'ಹೊಸ ಶಿಕ್ಷಣ ನೀತಿ' ಎನ್ನುವುದು ತಜ್ಞರ ಮಾತು.

ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಬಲಪಡಿಸುವ ಯಾವ ಗಂಭೀರ ಪ್ರಯತ್ನವೂ ನಡೆದಿರಲಿಲ್ಲ ಎಂದು ಹೇಳುವ ತಜ್ಞ ತಂಡ, ಶಿಕ್ಷಣದ ಜೊತೆ ಮೊದಲ ಎಂಟು ವರ್ಷಗಳ ಕಾಲ ವಿಶೇಷ ಕಾಳಜಿಯೂ ಮಕ್ಕಳಿಗೆ ದೊರಕಲಿದೆ. ಅದಕ್ಕೆ ಬೇಕಾದ ಅಂಶಗಳೆಲ್ಲ ನೀತಿಯಲ್ಲಿವೆ ಎಂದು ಖಚಿತವಾಗಿ ಹೇಳುತ್ತಿದೆ. ಮೊದಲ ಮೂರು ವರ್ಷಗಳಲ್ಲಿ ಮಗುವಿನ ಮೆದುಳಿನ ಬೆಳವಣಿಗೆ ತುಂಬಾ ವೇಗವಾಗಿ ಜರುಗುತ್ತದೆ. ಆಗ ಮಗುವಿನ ಸಮಗ್ರ ಬೆಳವಣಿಗೆಗೆ ಅತ್ಯಗತ್ಯವಾಗಿ ಬೇಕಾದ ಸುಲಲಿತ, ಆಟದ ಮಾದರಿಯ ಕಲಿಕಾ ಕ್ರಮಗಳನ್ನೊಳಗೊಂಡ 'ಪಂಚಕೋಶ ಪರಿಕಲ್ಪನೆ'ಯನ್ನು ಹೊಸ ಶಿಕ್ಷಣ ನೀತಿಯಲ್ಲಿ ಅಳವಡಿಸಲಾಗಿದೆ. ಈ ಹಿಂದೆ ನಾಲ್ಕೈದು ಸಲ ಪರಾಮರ್ಶೆಗೊಂಡರೂ ಏನೋ ಕೊರತೆ ಇದೆ ಎನ್ನಿಸುತ್ತಿತ್ತು. ಮೂಲಭೂತ ಪರಿಕಲ್ಪನೆ, ಅಗತ್ಯಗಳಿಗೆ ಸ್ಪಂದನೆ ಕಡಿಮೆ ಎಂಬ ಮಾತು ಶಿಕ್ಷಣವಲಯದಲ್ಲಿ ಇದ್ದುದರಿಂದ ಹೊಸ ನೀತಿಯಲ್ಲಿ ಎಳೆಯರ ಶಿಕ್ಷಣ, ಪರಿಪಾಲನೆ, ಶಾಲಾ ಶಿಕ್ಷಣ ಮತ್ತು ಶಿಕ್ಷಕರ ಉನ್ನತೀಕರಣ ಹಾಗೂ ವಯಸ್ಕರ ಶಿಕ್ಷಣಕ್ಕೂ ಗಮನ ಹರಿಸುತ್ತೇವೆ ಎನ್ನುವ 'ಎನ್‌ಸಿಎಫ್' ತಜ್ಞರು ದೇಶದ ಶಿಕ್ಷಣ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆಗೆ ಇದು ಸರಿಯಾದ ಮಾರ್ಗ ಎನ್ನುತ್ತಾರೆ.

ಹನ್ನೆರಡು ಜನ ಉನ್ನತ ಶಿಕ್ಷಣವೇತ್ತರು, ಅಂತರರಾಷ್ಟ್ರೀಯ ಪ್ರಶಸ್ತಿ ಸನ್ಮಾನಿತರು ಸಮಿತಿಯಲ್ಲಿದ್ದಾರೆ. ಖ್ಯಾತ ಗಣಿತಜ್ಞ ಮಂಜುಳ್ ಭಾರ್ಗವ, ಕಾದಂಬರಿಕಾರ ಮೈಕೆಲ್ ಡಾನಿಯೊ, ಜಾಮಿಯಾ ಮಿಲಿಯ ವಿವಿಯ ನಜ್ಮಾ ಅಖ್ತರ್, ಕೇಂದ್ರೀಯ ಬುಡಕಟ್ಟು ವಿವಿಯ ಉಪಕುಲಪತಿ ಟಿ.ವಿ. ಕಟ್ಟೀಮನಿ ಇವರೆಲ್ಲ ಮೂರಕ್ಕೂ ಹೆಚ್ಚು ವರ್ಷಗಳ ಕಾಲ ಚಿಂತಿಸಿ, ಚರ್ಚಿಸಿ, ವಿಮರ್ಶೆಗೊಳಪಡಿಸಿ ರೂಪಿಸಿರುವ ಚೌಕಟ್ಟು ಇದು. ಇದರಲ್ಲೇನಾದರೂ ದೋಷ, ಅಪೂರ್ಣತೆ, ಅಸತ್ಯ, ಅಸಾಂವಿಧಾನಿಕ, ಜನಾಂಗವಿರೋಧಿ, ಶಿಕ್ಷಣ ವ್ಯಾಕುಲತೆ ಉಂಟು ಮಾಡುವ ಅಂಶಗಳಿದ್ದರೆ ಸಾರ್ವಜನಿಕರು, ವಿದ್ಯಾರ್ಥಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಸಮಿತಿಯ ಗಮನಕ್ಕೆ ತರಲಿ ಎನ್ನುವ ಇರಾದೆಯಿಂದ 'ಎನ್‌ಸಿಎಫ್' ಅನ್ನು ಸಾರ್ವಜನಿಕ ಓದಿಗೆ, ಪರಾಮರ್ಶೆಗೆ ಬಿಡುಗಡೆ ಮಾಡಲಾಗಿದೆ. ಸರಳ ಮುಖಪುಟ, ಪರಿವಿಡಿ, ಗ್ರಂಥ ಋಣ, ಕೃತಜ್ಞತಾ ಪುಟ ಸೇರಿ ಒಟ್ಟು 630 ಪುಟಗಳವರೆಗೆ ವಿಸ್ತರಿಸಿಕೊಂಡಿರುವ ಮಹತ್ವದ ದಾಸ್ತಾನು ಇದು. ಇದಿನ್ನೂ ಪೂರ್ವಭಾವಿ ವರದಿ. ಅನುಷ್ಠಾನಗೊಳ್ಳಲು ನಿಗದಿಯಾಗಿರುವುದು 2024–25ರ ಶೈಕ್ಷಣಿಕ ವರ್ಷ. ಪರೀಕ್ಷೆ, ಮೌಲ್ಯಮಾಪನ, ವಿಷಯ ವಿನ್ಯಾಸದ ಜಾರಿಯ ಕುರಿತು ಯಾವುದೇ ದಿನಾಂಕವಾಗಲೀ, ಅಂತಿಮ ಗಡುವಾಗಲೀ ನಿಗದಿಯಾಗಿಲ್ಲ.

### ಸಿದ್ಧತೆಯ ದಾರಿ ದೂರ!

ಮೂರು ವರ್ಷಗಳ ಹಿಂದೆ ಹೊಸ ಶಿಕ್ಷಣ ನೀತಿ ರೂಪಿಸಲು ಸಿದ್ಧಗೊಂಡ ಸಮಿತಿಯು ದೇಶದಲ್ಲಿರುವ ಮೂಲ ಸೌಕರ್ಯಗಳ ಕೊರತೆಯನ್ನು ಗಮನದಲ್ಲಿಟ್ಟುಕೊಂಡು ನೀತಿ ರೂಪಿಸಿದ್ದರೆ ಅನುಷ್ಠಾನ ಸುಲಭವಾಗಬಹುದಿತ್ತು ಎಂದು ತಜ್ಞರು ಹೇಳುತ್ತಾರೆ. ಕಾರಣವಿಷ್ಟೇ, ದೇಶದಾದ್ಯಂತ ಹತ್ತು ಲಕ್ಷ ಶಿಕ್ಷಕರ ಕೊರತೆ ಇದೆ. ಶೇ. 40ರಷ್ಟು ಸರ್ಕಾರಿ ಶಾಲೆಗಳಿಗೆ ಗಟ್ಟಿಮುಟ್ಟಾದ ಕಟ್ಟಡಗಳಿಲ್ಲ. ಸಾವಿರಾರು ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆ, ಶುದ್ಧ ಕುಡಿಯುವ ನೀರಿನ ಘಟಕಗಳಿಲ್ಲ. ಮಧ್ಯಾಹ್ನದ ಬಿಸಿಯೂಟದ ಯೋಜನೆಗಳು ಜಾರಿಯಲ್ಲಿಲ್ಲ. ಶೇ. 40ರಷ್ಟು ಮಕ್ಕಳು ಪೌಷ್ಟಿಕ ಆಹಾರದ ಕೊರತೆಯಿಂದ ಬಳಲುತ್ತಿದ್ದಾರೆ. ಗ್ರಾಮೀಣ ಸಾಕ್ಷರತೆ ಸಂಪೂರ್ಣ ಮಟ್ಟದಲ್ಲಿಲ್ಲ. ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ದಾಖಲಾತಿ ಪ್ರಮಾಣ ಶೇ. 100ಕ್ಕಿಂತ ಹೆಚ್ಚಿದೆ. ಅದೇ ಮಾತು ಹೈಸ್ಕೂಲು ಮತ್ತು ಕಾಲೇಜು ಶಿಕ್ಷಣಕ್ಕೆ ಅನ್ವಯಿಸುವುದಿಲ್ಲ.



## ಬದಲಾವಣೆಗೆ ಶಿಕ್ಷಕನೇ ಮುಖ್ಯ, ತರಬೇತಿ ಇನ್ನೂ ಮುಖ್ಯ

ಆಮೂಲಾಗ್ರ ಬದಲಾವಣೆಗಳನ್ನು ನಿರೀಕ್ಷಿಸುವ ನೂತನ ಶಿಕ್ಷಣ ನೀತಿಯು ಸಂಪೂರ್ಣ ಬದಲಾವಣೆ ತರುವಲ್ಲಿ ಶಿಕ್ಷಕನ ಪಾತ್ರವೇ ನಿರ್ಣಾಯಕ ಎನ್ನುತ್ತದೆ. ಪಠ್ಯಕ್ರಮ ವಿನ್ಯಾಸಕಾರರು, ನೀತಿ ನಿರೂಪಕರು, ಪಠ್ಯಪುಸ್ತಕ ಬರೆಯುವವರು, ಶಾಲಾ ಆಡಳಿತಮಂಡಳಿಗಳು ಇದನ್ನು ಗಮನದಲ್ಲಿರಿಸಿಕೊಂಡು ತಮ್ಮ ಕಾರ್ಯ ಯೋಜನೆಗಳನ್ನು ತಯಾರಿಸಿಕೊಂಡು ಅದರಂತೆ ಕೆಲಸ ಮಾಡಬೇಕು.

ಸಿಕ್ಕ ಅವಕಾಶ ಮತ್ತು ಸವಾಲುಗಳನ್ನು ಶಿಕ್ಷಕ ಸರಿಯಾಗಿ ನಿಭಾಯಿಸಬೇಕು. ಉತ್ತಮ ಕೆಲಸ ಮಾಡುತ್ತೇನೆ ಎನ್ನುವ ಶಿಕ್ಷಕರಿಗೆ ಪೂರಕ ವಾತಾವರಣ ಶಾಲೆಯಲ್ಲಿರಬೇಕು. ಕಲಿಕೆಗೆ ಬೇಕಾದ ಸಂಪನ್ಮೂಲ, ಉಪಕರಣ, ಜಾಗ, ಶಾಲಾ ವ್ಯವಸ್ಥೆ ಇರಲೇಬೇಕು. ತಾನಿಂಥ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದೇನೆಂದು ಹೆಮ್ಮೆಪಡುವಂಥ ವಾತಾವರಣ ಇರಬೇಕು.

ತರಬೇತಿ ಪಡೆದ ಶಿಕ್ಷಕರು ಬೇಕಾದಷ್ಟು ಸಂಖ್ಯೆಯಲ್ಲಿ ಸಿಗಬೇಕು. ಕೆಲವು ವಿಶ್ವವಿದ್ಯಾಲಯಗಳು ನಾಲ್ಕು ವರ್ಷಗಳ ಸಂಯೋಜಿತ ಬಿ.ಎಡ್‌. ಶಿಕ್ಷಣ ನೀಡುತ್ತಿವೆ. ಅಲ್ಲಿನ ಕಲಿಕೆ ಗುಣಾತ್ಮಕವಾಗಿರಬೇಕು. ಸೇವೆಗೆ ಸೇರುವ ಮತ್ತು ಸೇವೆಯಲ್ಲಿರುವ ಎಲ್ಲರೂ 'ಟೀಚರ್ ಎಜುಕೇಶನ್ ಟೆಸ್ಟ್' ಉತ್ತೀರ್ಣರಾಗಿರಬೇಕು. ಒಮ್ಮೆ ಪರೀಕ್ಷೆ ಮುಗಿಸಿದ ಮೇಲೆ ಇನ್ನೇನಿದೆ ಎಂದು ಸುಮ್ಮನೆ ಕೂರಬಾರದು. ವೃತ್ತಿ ಕೌಶಲ್ಯ ಅಭಿವೃದ್ಧಿಗಾಗಿ ಶಿಕ್ಷಕರು ಫ್ಯಾಕಲ್ಟಿ ಇಂಪ್ರೂವ್‌ಮೆಂಟ್ ಕಾರ್ಯಕ್ರಮಗಳಲ್ಲಿ ನಿರಂತರ ತರಬೇತಿ ಪಡೆಯಬೇಕು. 'ಶಿಕ್ಷಕ ನಿರಂತರ ವಿದ್ಯಾರ್ಥಿ' ಎಂಬ ಮಾತು ಹೇಳಿಕೆಯಾಗದೆ ಅನುಭವಕ್ಕೆ ಬರುವಂತಾಗಬೇಕು.

ಜೊತೆಗೆ ಶಿಕ್ಷಕರಿಗೆ ಸಂಬಳ, ಬಡ್ತಿ, ಕೆಲಸ ಮಾಡಲು ಬೇಕಾದ ಒತ್ತಡ ರಹಿತ ವಾತಾವರಣ ಎಲ್ಲವೂ ಸರಿಯಾದ ಸಮಯಕ್ಕೆ ದೊರಕಬೇಕು. ಸತ್ಯ ಮತ್ತು ಸರಿಯಾದದ್ದನ್ನು ಕಲಿಸುವ ಸ್ವಾತಂತ್ರ್ಯ ಮತ್ತು ಜವಾಬ್ದಾರಿ ಎರಡನ್ನೂ ಶಿಕ್ಷಕನಿಗೆ ನೀಡಬೇಕು.